# ದಿನಾಂಕ: 02/02/2019 ರಂದು ವರ್ತೂರು ವಾರ್ಡ್ ಸಂಖ್ಯೆ:149 ಮಾನ್ಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ.ಪುಷ್ಪ ಮಂಜುನಾಥ್, ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಮಟ್ಟದಲ್ಲಿ ನಡೆದ ಸಭೆಯ ನಡವಳಿಗಳು

**ಒಟ್ಟು ಸದಸ್ಯರ ಸಂಖ್ಯೆ: 11**
**ಒಟ್ಟು ಹಾಜರಾದ ಸದಸ್ಯರ ಸಂಖ್ಯೆ: 07**

**ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು**

1) ಸಹಾಯಕ ಕಾರ್ಯಪಾಲಕ ಅಭಿಯಂತರರು , ಬೃಹತ್ ನೀರುಗಾಲುವೆ
2) ಸಹಾಯಕ ಅಭಿಯಂತರರು, ವರ್ತೂರು ವಾರ್ಡ್ ನಂ.149
3) ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ವೈಟ್‌ಫೀಲ್ಡ್ ಉಪವಲಯ
4) ಕಿರಿಯ ಆರೋಗ್ಯ ನಿರೀಕ್ಷಕರು, ವರ್ತೂರು ವಾರ್ಡ್ ನಂ.149
5) ಹಿರಿಯ ಆರೋಗ್ಯ ನಿರೀಕ್ಷಕರು, ವರ್ತೂರು ವಾರ್ಡ್ ನಂ.149
6) ಸಹಾಯಕ  ಅಭಿಯಂತರರು , ಬೆಸ್ಕಾಂ
7) ಸಹಾಯಕ  ಅಭಿಯಂತರರು , ಬೃಹತ್ ನೀರುಗಾಲುವೆ
8) ಎಲ್ಲಾ ವರ್ತೂರು ವಾರ್ಡ್ ಕಮಿಟಿ ಮಾನ್ಯ ಸದಸ್ಯರು ಮತ್ತು ಸಾರ್ವಜನಿಕರು

ಬೆಳಗ್ಗೆ 10:00 ಘಂಟೆಗೆ ಹಾಜರಿದ್ದ ಮಾನ್ಯ ಪಾಲಿಕೆ ಸದಸ್ಯರು ಹಾಗೂ ಕಾರ್ಯದರ್ಶಿಗಳು, ವಾರ್ಡ್ ಸಮಿತಿ ರವರು ಹಾಜರಿದ್ದ ಸಿಬ್ಬಂದಿಯನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಹಿಂದಿನ ಸಭೆಯ ನಡುವಳಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಕಾರ್ಯದರ್ಶಿಗಳು ವಾರ್ಡ್ ಸಮಿತಿ ಸಭೆಯ ಮುಂದೆ ಮಂಡಿಸಿದರು.

ಮುಂದುವರೆದು, ದಿನಾಂಕ: 02/02/2019 ರ ಸಭೆಯ ಅಜೆಂಡವನ್ನು ಮಾನ್ಯ ಅಧ್ಯಕ್ಷಕರು ಹಾಗೂ ಸದಸ್ಯರ ಅವಗಾಹನೆಗೆ ತರುತ್ತಾ, ಈ ಕೆಳಕಂಡಂತೆ ಚರ್ಚಿಸಲಾಯಿತು.

1. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ ಮತ್ತು ಸ್ವಚ್ಛತೆಯ ಬಗ್ಗೆ ವಿರ್ಮಶಿಸಲಾಯಿತು. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ಸ್ವಚ್ಛತೆಯ ಕುರಿತಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ, ಮಾಹಿತಿಯನ್ನು ನೀಡುವಂತೆ ಕೋರಲಾಗಿ, ವಾರ್ಡ್‌ನಲ್ಲಿ 1294 ರಸ್ತೆಗಳಲ್ಲಿದ್ದು, ಈಗ ಇರುವ 116 ಜನ ಪೌರ ಕಾರ್ಮಿಕರು ಸಾಲುತ್ತಿಲ್ಲವೆಂದು ಈ ಬಗ್ಗೆ ಮೈಕ್ರೋ ಪ್ಲಾನ್ ವರದಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರಿಗೆ ಮಂಡಿಸಲಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ನಂತರ ಬರುವ ಗುತ್ತಿಗೆದಾರರಿಂದ ಆಟೋ ಟಿಪ್ಪರ್‌ಗಳ ಮೂಲಕ ಸ್ವಚ್ಛತೆ ಕಾರ್ಯ ನಿರ್ವಹಿಸಲಾಗುವುದೆಂದು ತಿಳಿಸಿರುತ್ತಾರೆ.
   ಮುಂದುವರೆದು, ಸದರಿ ವಾರ್ಡ್ ವ್ಯಾಪ್ತಿಯಲ್ಲಿರುವ ಘನತ್ಯಾಜ್ಯದ (ಬ್ಲಾಕ್ ಸ್ಪಾಟ್)ಶೇಖರಣೆಯನ್ನು ತೆರವುಗೊಳಿಸಿ, ಶುಚಿಗೊಳಿಸಿ, ಬ್ಲೀಚಿಂಗ್ ಪೌಡರ್ ಸಿಂಪಡಿಸಲು ಸೂಚಿಸಲಾಯಿತು.

   ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ, ಮಹದೇವಪುರ ವಲಯ ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರು, ವರ್ತೂರು ವಾರ್ಡ್149

2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಬಗ್ಗೆ ಚರ್ಚಿಸಲಾಯಿತು. ಸದರಿ ಚರ್ಚೆಯಲ್ಲಿ ವರ್ತೂರು ವಾರ್ಡ್‌ನ ಮಧುರಾನಗರ, ಗುಂಜೂರು, ವರ್ತೂರು, ಪಣತ್ತೂರು ವ್ಯಾಪ್ತಿಯಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಲು ಚರ್ಚಿಸಲಾಯಿತು. ವಿದ್ಯುತ್ ಮೀಟರ್‌ಗಳನ್ನು ಪಡೆದುಕೊಳ್ಳಲು ಕ್ರಮ ವಹಿಸಲು ಸೂಚಿಸಲಾಯಿತು. ಬೋರ್‌ವೆಲ್‌ಗಳು ನಿಂತು ಹೋಗಿ ನೀರು ಬಾರದಿರುವ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಸಮಿತಿ ವತಿಯಿಂದ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ
ಹಾಗೂ ವಾರ್ಡ್ ಅಭಿಯಂತರರು

3. ಮಾನ್ಯ ಅಧ್ಯಕ್ಷರು, ಬೆಸ್ಕಾಂ ಅಧಿಕಾರಿಗಳಿಗೆ ತುರ್ತಾಗಿ ವರ್ತೂರು ವಾರ್ಡ್‌ನ ವ್ಯಾಪ್ತಿಯ ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕದಲ್ಲಿ ಯಾವುದೇ ವ್ಯತೆಯ ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಕುಡಿಯುವ ನೀರಿಗಾಗಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲು ಹಾಗೂ ಹಾಲಿ ಇರುವ ಬೋರ್‌ವೆಲ್‌ಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಹಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬೆಸ್ಕಾಂ – ಇ7 ಉಪವಿಭಾಗ

4. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮತ್ತು ಸ್ವತ್ತುಗಳ ಕಂದಾಯ ವಸೂಲಾತಿ ಬಗ್ಗೆ ಕಂದಾಯ ನಿರೀಕ್ಷಕರು ವರ್ತೂರು ವಾರ್ಡ್ ರವರು ಗೈರು ಹಾಜರಾಗಿದ್ದು, ಇವರುಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸಭೆಯಲ್ಲಿ ಸೂಚಿಸಲಾಯಿತು.

ಕ್ರಮ: ಸಹ ಕಂದಾಯ ಅಧಿಕಾರಿಗಳು

5. ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳ ಬಗ್ಗೆ ಚರ್ಚಿಸಲಾಯಿತು. ಹಾಲಿ ಸಿ.ಡಿ.ಪಿ ರಸ್ತೆ ಮತ್ತು ಆರ್.ಎಂ.ಪಿ ರಸ್ತೆಗಳನ್ನು ಅಗಲಗೊಳಿಸಿ, ಅಭಿವೃದ್ಧಿ ಪಡಿಸಲು ಆದಷ್ಟೂ ಬೇಗ ನೋಟಿಫಿಕೇಷನ್ ಮಾಡಲು ಸೂಚಿಸಿದೆ. ಮುಖ್ಯವಾಗಿ ಕುಂದಲಹಳ್ಳಿ ಜಂಕ್ಷನ್‌ನಿಂದ ಗುಂಜೂರು ಪಾಳ್ಯದ ವರೆಗೆ ಬರುವ ಸಿ.ಡಿ.ಪಿ ರಸ್ತೆ, ಗುಂಜೂರು ಮುಖ್ಯರಸ್ತೆಯಿಂದ ಬಳಗೆರೆ ರಸ್ತೆ (ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ನಿಂದ ಬಿ.ಡಿ.ಎ ಅಪಾರ್ಟ್‌ಮೆಂಟ್ ವರೆಗೆ) ಮತ್ತು ವರ್ತೂರು ಬಳಗೆರೆ ಮೂಲಕ ಪಣತ್ತೂರು ಸೇರುವ ಮುಖ್ಯರಸ್ತೆಗಳನ್ನು ಶೀಘ್ರವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
/ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ (ಮ.ವಿಭಾಗ) ಕೇಂದ್ರ ಕಛೇರಿ

6. ವಾರ್ಡ್ ನಂ.149ರಲ್ಲಿ ವ್ಯಾಪ್ತಿಯಲ್ಲಿ ಬರುವ ಇಂದಿರಾ ಕ್ಯಾಂಟೀನ್ ಹತ್ತಿರ ವಾರ್ಡ್ ಕಛೇರಿ ಹಾಗೂ ಬೆಂಗಳೂರು ಒನ್ ಕೇಂದ್ರವನ್ನು ಸ್ಥಾಪಿಸಲು ಜಾಗವನ್ನು ಗುರುತಿಸಿ, ಸಾರ್ವಜನಿಕ ಹಿತದೃಷ್ಠಿಯಿಂದ ಬೆಂಗಳೂರು ಒನ್ ಕೇಂದ್ರವು ತೀರ ಅವಶ್ಯಕತೆ ಇದ್ದು, ಸದರಿ ಕಛೇರಿಯಲ್ಲಿ ಅಥವಾ ವಾರ್ಡ್ ಕಛೇರಿ ವರ್ತೂರಿನಲ್ಲಿ ಬೆಂಗಳೂರು ಒನ್ ಕೇಂದ್ರವನ್ನು ಸ್ಥಾಪಿಸಲು ಕ್ರಮ ಜರುಗಿಸುವಂತೆ ಸೂಚಿಸಲಾಯಿತು.

ಕ್ರಮ: ವಾರ್ಡ್ ಅಭಿಯಂತರರು

7. ವಾರ್ಡ್ ನಂ.149ರಲ್ಲಿ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಗುಂಜೂರು ಪಾಳ್ಯದ ಗ್ರಾಮದ ಸರ್ವೇ ನಂ.108 ರಲ್ಲಿ ಇರುವ ಸರ್ಕಾರಿ ಶಾಲೆಯ ಖಾತೆಯನ್ನು ರಿಜಿಸ್ಟರ್‌ನಲ್ಲಿ ದಾಖಲಿಸಲು ಸ್ಥಳೀಯ ಶಾಲಾ ಕಾಲೇಜುಗಳ ವಿಧ್ಯಾರ್ಥಿಗಳ ಹಾಗು ಸಾರ್ವಜನಿಕ ಉಪಯೋಗ/ಹಿತದೃಷ್ಠಿಯಿಂದ ಕ್ರೀಡಾಂಗಣವನ್ನು ಸ್ಥಾಪಿಸಲು ಜಾಗವನ್ನು ಬಿಬಿಎಂಪಿಗೆ ಹಸ್ತಾಂತರಿಸಲು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಪತ್ರ ಬರೆಯಲು ಕ್ರಮ ಜರುಗಿಸುವಂತೆ ಸೂಚಿಸಲಾಯಿತು.

ಕ್ರಮ: ಕಂದಾಯ ಅಧಿಕಾರಿಗಳು/
ಸಹಾಯಕ ಕಂದಾಯ ಅಧಿಕಾರಿಗಳು (ವೈ.ಉವ)

8. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬೃಹತ್ ನೀರುಗಾಲುವೆ ವಿಭಾಗದವರು ಸರ್ವೆ ನಡೆಸಿ, ರಾಜಕಾಲುವೆಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲು ನಿರ್ಣಹಿಸಿದರು. ಮುಂದುವರೆದು ವಾರ್ಡ್ ವ್ಯಾಪ್ತಿಯಲ್ಲಿ ರಾಜಕಾಲುವೆಗಳು ಹೂಳು ತುಂಬಿದ್ದು, ಆಧ್ಯತೆ ಮೇರೆಗೆ ಹೂಳು ತೆಗೆಯುವ ಕಾರ್ಯವನ್ನು ಕೈಗೊಳ್ಳುವಂತೆಯು ಹಾಗೂ ಮುಂದಿನ ಸಭೆಗೆ ಬೃಹತ್ ನೀರುಗಾಲುವೆ ವಿಭಾಗದಿಂದ ಸಭೆಗೆ ತಪ್ಪದೇ ಹಾಜರಾಗುವಂತೆ ಸೂಚಿಸಲಾಯಿತು.

ಕ್ರಮ: ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆ

9. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪಣತ್ತೂರು ಗ್ರಾಮದ ಕ್ರೋಮ ರಸ್ತೆಯಲ್ಲಿರುವ ಮರಗಳನ್ನು ರಸ್ತೆಯ ಅಭಿವೃದ್ಧಿಗಾಗಿ ಕಟಾವು ಮಾಡುವುದು ಹಾಗೂ ವರ್ತೂರು ಗುಂಜೂರು ರಸ್ತೆಯಲ್ಲಿ ಒಣಗಿ ಹೋಗಿರುವ ಬೃಹತ್ ಮರಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

ಕ್ರಮ: ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ

| | |
|---|---|
| ಸಹಿ/- | ಸಹಿ/- |
| **ಕಾರ್ಯದರ್ಶಿ ಮತ್ತು ಸಂಚಾಲಕರು** | **ಅಧ್ಯಕ್ಷರು, ವಾರ್ಡ್ ಕಮಿಟಿ** |
| ಹೆಸರು : ವೈ.ಆರ್.ರಮೇಶ್ | ಹೆಸರು : ಪುಷ್ಪ ಮಂಜುನಾಥ್ |
| ಹುದ್ದೆ : ಸಹಾಯಕ ಅಭಿಯಂತರರು | ಪಾಲಿಕೆ ಸದಸ್ಯರು |
| ದಿನಾಂಕ : 02/02/2019 | ವರ್ತೂರು ವಾರ್ಡ್ ನಂ.149 |

**ಪ್ರತಿಯನ್ನು:**

1) ಕೌನ್ಸಿಲ್ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ, ಬೃಹತ್ ನೀರುಗಾಲುವೆ
3) ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
4) ಅಭಿಯಂತ ಸದಸ್ಯರು, ಹಾಗೂ ಮುಖ್ಯ ಅಭಿಯಂತರರು, ಬೆಂಗಳೂರು ಅಭಿವೃದಿ ಪ್ರಾಧಿಕಾರ
5) ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ, ಕೆ.ಆರ್.ವೃತ್ತ. ಬೆಂಗಳೂರು
6) ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಮಹದೇವಪುರ ವಿಭಾಗ
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ, ಬಿಬಿಎಂಪಿ
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇ-4 ವಿಭಾಗ
9) ಸಹ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಲಯ, ಬಿಬಿಎಂಪಿ
10) ಸಹ ಕಂದಾಯ ಅಧಿಕಾರಿಗಳು, ಜಾಹಿರಾತು, ಬಿಬಿಎಂಪಿ
11) ಹಿರಿಯ ಆರೋಗ್ಯ ನಿರೀಕ್ಷಕರು, ವರ್ತೂರು ವಾರ್ಡ್149
12) ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ.